ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಮ್‌ಎಫ್‌ಸಿ ನ್ಯಾಯಾಲಯ, ಹುಬ್ಬಳ್ಳಿ
ಸಿ ಸಿ ನಂ.226/2012

ಸಾಕ್ಷಿದಾರರ ಹೆಸರು	:	ಬಿ ಶಿವಪ್ಪ	ಪಿಡಬ್ಲೂ	:	24
ತಂದೆಯ ಹೆಸರು	:	ಬೆಳಪ್ಪ	ಸಿಡಬ್ಲೂ	:	21
ವಯಸ್ಸು	:	68 ವರ್ಷ			
ಉದ್ಯೋಗ	:	ನಿವೃತ್ತ ಇನ್ಸಪೆಕ್ಟರ ಜನರಲ್ ಆಫ್ ಸ್ಟ್ಯಾಂಪ್ಸ ಆ್ಯಂಡ್ ರಜಿಸ್ಟ್ರೇಷನ್			
ವಾಸ ಸ್ಥಳ	:	ಬೆಂಗಳೂರು			

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಿದ ದಿನಾಂಕಃ 14/11/2019
ಮುಖ್ಯ ವಿಚಾರಣೆ ಎಪಿಪಿ ಯವರಿಂದ :

ನಾನು ದಿ.20.12.1999 ರಿಂದ 09.08.2000 ರವರೆಗೆ ಮಹಾನಗರ ಪಾಲಿಕೆಯ ಆಯುಕ್ತರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನನಗೆ ಚಾಸಾ 20 ರವರ ಪರಿಚಯ ಇದೆ ಅವರು ನನ್ನ ಪೂರ್ವಾಧಿಕಾರಿ ಆಗಿದ್ದರು. ಮಹಾನಗರ ಪಾಲಿಕೆಯಲ್ಲಿ ಪಿಡಬ್ಲೂಡಿ, ಆರೋಗ್ಯ ಇಲಾಖೆ, ಲೆಕ್ಕಪತ್ರ ಇಲಾಖೆ ಹಾಗೂ ಆಡಳಿತದ ವಿಭಾಗಗಳು ಇವೆ. ಆಯಾ ವಿಭಾಗಗಳಿಗೆ ಒಬ್ಬೊಬ್ಬ ಮುಖ್ಯಸ್ಥರು ಇರುತ್ತಾರೆ. ಪಿಡಬ್ಲೂಡಿ ಇಲಾಖೆಗೆ ಒಬ್ಬ ಸೂಪರಿಟೆಂಡೆಂಟ್ ಇಂಜೀನಿಯರು ಮುಖ್ಯಸ್ಥರಾಗಿರುತ್ತಾರೆ. ಲೆಕ್ಕಪತ್ರ ಇಲಾಖೆಗೆ ಮುಖ್ಯ ಲೆಕ್ಕಾಧಿಕಾರಿಗಳು ಮುಖ್ಯಸ್ಥರಾಗಿರುತ್ತಾರೆ. ಹುಬ್ಬಳ್ಳಿ ಪಾಲಿಕೆಯ ಪಿಡಬ್ಲೂಡಿ ವಿಭಾಗದ ಮುಖ್ಯಸ್ಥರು ಧಾರವಾಡ ಪಾಲಿಕೆಯ ಪಿಡಬ್ಲೂಡಿ ವಿಭಾಗದ ಮೇಲ್ವಿಚಾರಣೆಯನ್ನು ಮಾಡುತ್ತಾರೆ. ಧಾರವಾಡದಲ್ಲಿಯೂ ಕೂಡಾ ಲೆಕ್ಕಪತ್ರ ವಿಭಾಗ ಇದ್ದು ಅದರ ಮೇಲ್ವಿಚಾರಣೆಯನ್ನು ಕೂಡಾ ಹುಬ್ಬಳ್ಳಿಯ ಲೆಕ್ಕಪತ್ರ ವಿಭಾಗದ ಮುಖ್ಯಸ್ಥರು ಮಾಡುತ್ತಾರೆ.

ದಿ.20.03.2000 ರಂದು ಮಹಾನಗರ ಪಾಲಿಕೆಯ ಮಹಾಸಭೆಯಲ್ಲಿ ಧಾರವಾಡ ನಗರದ ಒಂದು ವಾರ್ಡಿನ ಕಾರ್ಪೋರೇಟರಾದ ಚಾಸಾ 13 ರವರು ಸದರಿ ಸಭೆಯಲ್ಲಿ ಅವರ ವಾರ್ಡಿನ ಹಲವಾರು ಕೆಲಸಗಳು ಕಾರ್ಯಗತವಾಗದೇ ಕಾರ್ಯಗತ ಆಗಿವೆ ಅಂತಾ

ದಾಖಲೆಯಲ್ಲಿ ತೋರಿಸಲಾಗಿದೆ ಹಾಗೂ ಹಣವನ್ನು ತಿಂದು ಹಾಕಿದ್ದಾರೆ ಅಂತಾ ಆಪಾದನೆಯನ್ನು ಮಾಡಿದರು ಹಾಗೂ ಸದರಿ ಸಭೆಯಲ್ಲಿ ಆ ಬಗ್ಗೆ ಕೆಲವು ದಾಖಲಾತಿಗಳನ್ನು ನಮ್ಮ ಗಮನಕ್ಕೆ ತಂದರು. ಆ ದೂರಿನ ಮೇರೆಗೆ ನಾವು ಚಾಸಾ 14 ರವರಿಗೆ ಸ್ಥಾನಿಕ ವಿಚಾರಣೆಯನ್ನು ಮಾಡಿ ವರದಿಯನ್ನು ಹಾಕುವಂತೆ ಕೇಳಿಕೊಂಡೇವು. ಅದರ ಮೇರೆಗೆ ಚಾಸಾ 14 ರವರು ಸ್ಥಾನಿಕ ವಿಚಾರಣೆಯನ್ನು ಮಾಡಿ ಸದರಿ ವಾರ್ಡಿನ 268 ಕಾಮಗಾರಿಗಳನ್ನು ಮಾಡದೇ ಇದ್ದರೂ ಕೂಡಾ ಒಬ್ಬ ಎಸ್ ಎನ್ ನೂಲ್ವಿ ಅಂದರೆ ಆರೋಪಿ ಸೇಜ ನಂ.8 ಗುತ್ತಿಗೆದಾರರ ಮೂಲಕ ಮಾಡಿಸಲಾಗಿದೆ ಎಂದು ದಾಖಲೆಗಳನ್ನು ಸೃಷ್ಟಿಸಿ ಹಣವನ್ನು ಆರೋಪಿ ಸೇಜ ನಂ.8 ರವರಿಗೆ ಸಂಧಾಯವಾಗಿರುತ್ತದೆ ಅಂತಾ ವರದಿಯನ್ನು ಕೊಟ್ಟರು. ಪಾಲಿಕೆಯ ಯಾವುದೇ ಗುತ್ತಿಗೆದಾರನು ಪಾಲಿಕೆ ಅಡಿಯಲ್ಲಿ ನೊಂದಾಯಿತ ಆಗಿರಬೇಕು ಆದರೆ ಆರೋಪಿ ಸೇಜ ನಂ.8 ನೊಂದಾಯಿತ ಗುತ್ತಿಗೆದಾರ ಆಗಿರುವುದಿಲ್ಲ. ನಂತರ ಕಛೇರಿಯಲ್ಲಿ ವಿಚಾರಣೆ ಮಾಡಲಾಗಿ ಆ ಕಾಮಗಾರಿಗಳ ಬಗ್ಗೆ ಯಾವುದೇ ಪತ್ರ ವ್ಯವಹಾರದ ಕಡತವು ಇರಲಿಲ್ಲ. ಅಲ್ಲದೇ ಮೆಸರಮೆಂಟ್ ಬುಕ್ಕುಗಳು ಕೂಡಾ ಇರಲಿಲ್ಲ. ಆ ರೀತಿಯ ಕಡತಗಳು ಲೆಕ್ಕಪತ್ರ ವಿಭಾಗದಲ್ಲಿ ಆಗಲೀ ಅಧಚಿ.ವಾ ಪಿಡಬ್ಲೂಡಿ ವಿಭಾಗದಲ್ಲಿ ಆಗಲೀ ಇರಬೇಕು ಆದರೆ ಇರಲಿಲ್ಲ.

ವರದಿ ಬಂದ ನಂತರ ಮೇಲ್ನೋಟಕ್ಕೆ ಅಕ್ರಮ ಕಂಡು ಬಂದಿದ್ದರಿಂದ ನಾನು ಆರೋಪಿ ನಂ.4 ರಿಂದ 6 ರವರುಗಳನ್ನು ಅಮಾನತ್ತು ಮಾಡಿದೆ. ಅಲ್ಲದೇ ಇವರುಗಳ ಮೇಲೆ ಮೇಲ್ವಿಚಾರಣೆಯನ್ನು ಮಾಡುತ್ತಿದ್ದ ಆರೋಪಿ ನಂ.1 ರಿಂದ 3 ರವರು ಆ ಸಮಯದಲ್ಲಿ ನಿವೃತ್ತ ಆಗಿದ್ದರಿಂದ ಈ ಬಗ್ಗೆ ಸಮಗ್ರ ಪೊಲೀಸ ತನಿಖೆ ಆಗಬೇಕು ಅಂತಾ ಸೂಚನೆ ಕೊಟ್ಟೇನು. 268 ಕಾಮಗಾರಿಗಳು ಸಂಪೂರ್ಣ ಆಗಿವೆ ಅಂತಾ ಹೇಳಲಾದ ಕಾಮಗಾರಿಗಳು ದಿ.01.04.1999 ರಿಂದ 31.03.2000 ರ ಅವಧಿಯಲ್ಲಿ ಆಗಿವೆ ಅಂತಾ ಕಾಣಿಸಿತ್ತು. ಸದರಿ ಕಾಮಗಾರಿಗಳು ಧಾರವಾಡ ಮಹಾನಗರ ಪಾಲಿಕೆಯ ಲೋಕೋಪಯೋಗಿ ಇಲಾಖೆಯಲ್ಲಿ ಆಗಿದ್ದವು.

ಈ ಹಂತದಲ್ಲಿ ಆರೋಪಿ ಪರ ವಕೀಲರು ಸಾಕ್ಷಿಯು ಒಂದು ದಾಖಲೆಯನ್ನು ನೋಡಿ ಸಾಕ್ಷಿ ಹೇಳುತ್ತಿದ್ದ ಬಗ್ಗೆ ತಕರಾರು ಮಾಡಿದ್ದಕ್ಕೆ ಸಾಕ್ಷಿಗೆ ದಾಖಲೆಯನ್ನು ನೋಡದೇ

ಸಾಕ್ಷಿ ಹೇಳಿ ಅಂತಾ ಸೂಚಿಸಲಾಯಿತು.

1994 ರ ಅವದಿಯಲ್ಲಿ ಹು-ಧಾ ಮಹಾನಗರ ಪಾಲಿಕೆ ದೊಡ್ಡ ಪಾಲಿಕೆಯಾಗಿದ್ದರಿಂದ ಆ ಸಮಯದಲ್ಲಿ 10 ಸಾವಿರ ರೂಪಾಯಿ ಹಾಗೂ ಅದಕ್ಕೂ ಕೆಳಪಟ್ಟು ಖರ್ಚಿನ ಕಾಮಗಾರಿಯನ್ನು ಸ್ಥಾನಿಕ ಜ್ಯೂನಿಯರ್ ಇಂಜೀನಿಯರ ರವರು ಮಾಡಬಹುದು ಎಂಬ ಬಗ್ಗೆ ಸಭಾ ನಡುವಳಿ ಆಗಿತ್ತು. ನಂತರ ಈ ಕೇಸಿನ ಅಕ್ರಮ ಆದ ಬಗ್ಗೆ ಕಂಡು ಬಂದ ನಂತರ ನಾವು ಅಂತಹ ಕಾಮಗಾರಿಗಳನ್ನು ಸ್ಥಾನಿಕ ಜ್ಯೂನಿಯರ್ ಇಂಜೀನಿಯರಗಳ ಬದಲಾಗಿ ಪಿಡಬ್ಲ್ಯೂಡಿ ವಿಭಾಗದ ಮುಖ್ಯಸ್ಥರಿಗೆ ವಹಿಸಬೇಕು ಎಂಬ ಬಗ್ಗೆ ಸಭಾ ನಡುವಳಿಯನ್ನು ಮಾರ್ಪಾಡು ಮಾಡಿದೇವು.

ಈ ಕೇಸಿನ ಆರೋಪಿ ಸೇಜ ನಂ.5 ರಿಂದ 7 ರವರು ಕಾಮಗಾರಿಗಳು ನಿಜವಾಗಿಯೂ ಆಗಿದೇಯಾ? ಅಥವಾ ಇಲ್ಲಾ? ಎಂಬುವುದನ್ನು ಖಚಿತಪಡಿಸಿಕೊಳ್ಳದೇ ಚೆಕ್ಕುಗಳನ್ನು ಪಾಸು ಮಾಡಿರುತ್ತಾರೆ. ಆಯುಕ್ತರು ಮೇಲೆ ಹೇಳಿದ ಎಲ್ಲ ವಿಭಾಗದ ಕೆಲಸಗಳಲ್ಲಿ ಕಾರ್ಯ ನಿರತ ಆಗಿರುವುದರಿಂದ ಇಂತಹ ಚೆಕ್ಕುಗಳನ್ನು ಸಂಬಂದಪಟ್ಟ ಲೆಕ್ಕಪತ್ರದ ವಿಭಾಗದ ಅಧಿಕಾರಿಗಳು ಅದಕ್ಕೆ ಸಂಬಂದಪಟ್ಟ ಎಲ್ಲ ದಾಖಲೆಗಳನ್ನು ಪರಿಶೀಲಿಸಿ ಮೇಲಾಧಿಕಾರಿಗಳಿಗೆ ಕಳುಹಿಸತಕ್ಕದ್ದು ಆದರೆ ಆರೋಪಿ ಸೇಜ ನಂ.5 ರಿಂದ 7 ರವರು ಇಂತಹ ಯಾವುದೇ ಪರಿಶೀಲನೆಯನ್ನು ಮಾಡಿಲ್ಲ.ಈ ಬಗ್ಗೆ ಪೊಲೀಸರಿಂದ ಸೂಕ್ತ ತನಿಖೆಯನ್ನು ಮಾಡಿಸಬೇಕು ಎಂದು ಸೂಚಿಸಲಾಯಿತು. ತದನಂತರ ದಿ.09.08.2000 ಕ್ಕೆ ನಾನು ಹಾವೇರಿ ವರ್ಗಾವಣೆಯಾಗಿ ಹೋದೇನು.

ಈ ಬಗ್ಗೆ ಚಾಸಾ 1 ರವರು ನನ್ನ ಸೂಚನೆಯ ಮೇರೆಗೆ ನಿಪಿ.1 ನ್ನು ಕೊಟ್ಟರು. ಚಾಸಾ 14 ರವರು ಸ್ಥಾನಿಕ ವಿಚಾರಣೆಯನ್ನು ಮಾಡಿ ಕೊಟ್ಟ ವರದಿ ಮತ್ತು ಇತರೇ ದಾಖಲಾತಿಗಳನ್ನು ನೋಡಿದಲ್ಲಿ ಗುರುತಿಸುತ್ತೇನೆ.

ಈ ಹಂತದಲ್ಲಿ ಸದರಿ ವರದಿಯ ಮೂಲ ದಾಖಲಾತಿಗಳು ಕಡತದಲ್ಲಿ ಇಲ್ಲದೇ ಇರುವುದರಿಂದ, ಮೂಲ ದಾಖಲಾತಿಗಳು ಬಂದ ಮೇಲೆ ಮುಖ್ಯ ವಿಚಾರಣೆಯನ್ನು ಮುಂದುವರೆಸಬೇಕು ಮಾನ್ಯ ಸಅಅ ರವರು ಪ್ರಾರ್ಥಿಸಿಕೊಂಡರು, ಆದರೆ ಹಲವಾರು

ಬಾರಿ ನಿರ್ದೇಶನ ನೀಡಿದ್ದರೂ ಕೂಡಾ ಸಂಬಂಧಪಟ್ಟ ತನಿಖಾಧಿಕಾರಿಯು ಮೂಲ ದಾಖಲಾತಿಗಳನ್ನು ಹಾಜರು ಮಾಡಿಲ. ಆದ್ದರಿಂದ ಈ ಕೇಸನ್ನು ಮತ್ತೇ ಮುಂದೂಡುವಲ್ಲಿ ಅರ್ಥ ಇರುವುದಿಲ್ಲ ಆದ್ದರಿಂದ ಮಾನ್ಯ ಸಸಅ ರವರ ಪ್ರಾರ್ಥನೆಯನ್ನು ತಳ್ಳಿ ಹಾಕಲಾಯಿತು.

<u>ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ ಎಲ್.ಎಮ್.ಎಸ್ ವಕೀಲರಿಂದಃ</u>

3 ನೇ ಆರೋಪಿಯು ದಿ.31.03.1999 ರಂದು ನಿವೃತ್ತಿಯಾದರು ಎಂದರೆ ನಿಜ. ನಿವೃತ್ತಿಯಾದ ನಂತರ ದಿ.01.04.1999 ರಿಂದ ದಿ.31.03.2000 ರವರೆಗೆ ಧಾರವಾಡ ಘಟಕದ ನೀರು ಸರಬರಾಜು ವಿಭಾಗದಲ್ಲಿ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಅಂತಾ ಒಂದು ವರ್ಷದ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡಿರುತ್ತಾರೆ ಎಂದರೆ ನಿಜ. ಆಗಿನ ಆಯುಕ್ತರು ದಿ.07.04.1999 ರಂದು ಆ ಬಗ್ಗೆ ಆದೇಶ ಮಾಡಿದ್ದಾರೆ ಎಂದರೆ ನಿಜ. ಆ ಆದೇಶದ ಮೇರೆಗೆ 3 ನೇ ಆರೋಪಿಯ ಕಾರ್ಯ ವ್ಯಾಪ್ತಿ ಧಾರವಾಡ ವಿಭಾಗದ ಸಾರ್ವಜನಿಕರಿಗೆ ನೀರು ಸರಬರಾಜು ಸರಿಯಾಗಿ ಆಗುತ್ತಿದೆಯಾ? ಅಥವಾ ಇಲಾ? ಎಂಬ ಬಗ್ಗೆ ನೋಡಿಕೊಳ್ಳುವುದು ಎಂದರೆ ನಿಜ. ಇಂತಹ ಕೆಲಸವನ್ನು ಅವರು ಅವರ ಕೈ ಕೆಳಗಡೆ ಇರುವ ಜ್ಯೂನಿಯರ್ ಇಂಜೀನಿಯರು ಹಾಗೂ ವಾಲಮನ್‌ಗಳ ಮೂಲಕ ಮಾಡಿಸಬೇಕಾಗುತ್ತದೆ ಎಂದರೆ ಸಾಕ್ಷಿಯು ಅವರು ಕೂಡಾ ಮೇಲ್ವಿಚಾರಣೆ ಮಾಡಬೇಕು ಎನ್ನುತ್ತಾರೆ. ಗುತ್ತಿಗೆ ಆಧಾರದಲ್ಲಿ ನೇಮಕಗೊಂಡಾಗ 3 ನೇ ಆರೋಪಿತನಿಗೆ ಯಾವುದೇ ಎಸ್ಟಿಮೇಟ್ ಮತ್ತು ಅಳತೆ ಪುಸ್ತಕ, ಓಚರ್ ಅಥವಾ ಬಿಲ್ಲು ಬುಕ್ಕಗಳ ಮೇಲೆ ಸಹಿ ಮಾಡುವ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಅಂತಹ ದಾಖಲೆಗಳನ್ನು ಆತನು ಶಿಪಾರಸ್ಸು ಮಾಡಲು ಆಗಲೀ ಅಥವಾ ಸಹಿ ಮಾಡಲು ಆಗಲೀ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಈ ಕೇಸಿನಲ್ಲಿ ಅಕ್ರಮ ಆಗಿದೆ ಅಂತಾ ಹೇಳಲಾದ ಅವಧಿ ದಿ.30.04.1999 ರಿಂದ 15.02.2000 ಎಂದರೆ ಸಾಕ್ಷಿಯು ದಿ.01.04.1999 ರಿಂದ 31.03.2000 ಎನ್ನುತ್ತಾರೆ. ನಿಪಿ.1 ರಲ್ಲಿ ಸದರಿ ಅವಧಿಯನ್ನು ದಿ.30.04.1999 ರಿಂದ 15.02.2000 ಅಂತಾ ಕಾಣಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಈ ಮೇಲೆ ಹೇಳಿದ 268 ಗುತ್ತಿಗೆ ಕೆಲಸಗಳು ಧಾರವಾಡ ಘಟಕದ ನೀರು ಸರಬರಾಜು ವಿಭಾಗಕ್ಕೆ ಸಂಬಂದವಿಲ್ಲದ

ಕಾಮಗಾರಿಗಳು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಹಃ ಹೇಳುತ್ತಾರೆ ನಿಪಿ.1 ನ್ನು ಕೊಡುವ ದಿನಾಂಕದ ಪೂರ್ವದಲ್ಲಿಯೇ ನಾನು ಹಾವೇರಿ ವರ್ಗಾವಣೆಯಾಗಿರುತ್ತೇನೆ. ಹುಬ್ಬಳ್ಳಿ ಪಾಲಿಕೆಯ ಪಿಡಬ್ಲೂಡಿ ವಿಭಾಗ ಹಾಗೂ ಧಾರವಾಡ ಪಾಲಿಕೆಯ ನೀರು ಸರಬರಾಜು ಇಲಾಖೆ ಬೇರೆ ಬೇರೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ.

ಪೊಲೀಸರ ಮುಂದೆ 268 ತುಂಡು ಗುತ್ತಿಗೆಗಳು ಧಾರವಾಡ ಘಟಕದ ನೀರು ಸರಬರಾಜು ಇಲಾಖೆಗೆ ಸಂಬಂಧಪಟ್ಟ ಕಾಮಗಾರಿಗಾಳು ಅಂತಾ ಹೇಳಿಲ್ಲ ಎಂದರೆ ಸಾಕ್ಷಿಯು ಪಿಡಬ್ಲೂಡಿಯ ಕಾಮಗಾರಿಗಳು ಅಂತಾ ಹೇಳಿರುತ್ತೇನೆ ಹಾಗೂ ಪಿಡಬ್ಲೂಡಿ ಕಾಮಗಾರಿಗಳು ಎಂದರೆ ನೀರು ಸರಬರಾಜು ಕೂಡಾ ಬರುತ್ತದೆ ಎನ್ನುತ್ತಾರೆ. 268 ತುಂಡು ಗುತ್ತಿಗೆಗಳು ಪಿಡಬ್ಲೂಡಿ ಮತ್ತು ಧಾರವಾಡ ಘಟಕದ ನೀರು ಸರಬರಾಜು ಇಲಾಖೆಗೆ ಸಂಬಂದಪಟ್ಟ ಗುತ್ತಿಗೆಗಳು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ನೀರು ಸರಬರಾಜು ಎಂಬ ವಿಭಾಗ ಇಲ್ಲ ಎನ್ನುತ್ತಾರೆ. ಸಾಕ್ಷಿ ಸ್ವತಹಃ ಹೇಳುತ್ತಾರೆ ನೀರು ಸರಬರಾಜು ಕೂಡಾ ಪಿಡಬ್ಲೂಡಿ ವಿಭಾಗದಲ್ಲಿ ಬರುತ್ತದೆ ಎನ್ನುತ್ತಾರೆ. ಧಾರವಾಡ ಘಟಕದ ನೀರು ಸರಬರಾಜು ಇಲಾಖೆ ಪಿಡಬ್ಲೂಡಿ ವಿಭಾಗದಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ. ಯಾವ ವಿಭಾಗಕ್ಕೆ ಕೆಲಸಗಳನ್ನು ವಹಿಸಿಕೊಟ್ಟಿರುತ್ತೇವೆಯೋ ಆ ಕೆಲಸಗಳನ್ನು ಅದೇ ವಿಭಾಗದವರು ಮಾಡಬೇಕಾಗುತ್ತದೆ ಎಂದರೆ ನಿಜ. 3 ನೇ ಆರೋಪಿ ದಿ.01.04.1999 ರಿಂದ 31.03.2000 ರವರೆಗೆ ಧಾರವಾಡದ ಘಟಕದ ನೀರು ಸರಬರಾಜು ವಿಭಾಗದಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವುದರಿಂದ ಈ ಕೇಸಿನಲ್ಲಿ ಹೇಳಿದ 268 ತುಂಡು ಗುತ್ತಿಗೆ ಕಾಮಗಾರಿಗಳಿಗೂ ಹಾಗೂ 3 ನೇ ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಇವತ್ತೂ ಸಾಕ್ಷಿ ಹೇಳುವ ಪೂರ್ವದಲ್ಲಿ ನಾನು ಪೊಲೀಸರು ಸಲ್ಲಿಸಿದ ಚಾರ್ಜಶೀಟನ್ನು ನೋಡಿರುತ್ತೇನೆ. ಸದರಿ ಚಾರ್ಜಶೀಟನಲ್ಲಿ ಫಾರೆನ್ಸಿಕ್ ಪ್ರಯೋಗಾಲಯ ಸಲ್ಲಿಸಿದ ವರದಿಯನ್ನು ನೋಡಿಲ್ಲ. ಸದರಿ ವರದಿಯಲ್ಲಿ 3 ನೇ ಆರೋಪಿಯು ಮಾಡಿದ್ದಾನೆ ಅಂತಾ ಹೇಳಿದ ಸಹಿಗಳು 3 ನೇ ಆರೋಪಿಯ ಸಹಿಗಳು ಅಲ್ಲಾ ಹಾಗೂ ಅವು ಖೊಟ್ಟಿಯಾಗಿರುತ್ತವೆ ಅಂತಾ ಸದರಿ

ವರದಿಯಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಸ್ವತಹಃ ಹೇಳುತ್ತಾರೆ ಚಾರ್ಜಶೀಟ ಸಲ್ಲಿಸಿದ ಸಮಯದಲ್ಲಿ ನಾನು ವರ್ಗಾವಣೆಯಾಗಿದ್ದೇನು. ಕಾಮಗಾರಿಗಳಿಗೆ ಸಂಬಂದಪಟ್ಟ ಪಾಸು ಮಾಡಿದ ಎಲ್ಲ ಚೆಕ್ಕುಗಳ ಮೇಲೆ ನನ್ನ ಸಹಿ ಕೂಡಾ ಇದೆ ಎಂದರೆ ಸಾಕ್ಷಿಯು ಕೇವಲ ಮೂರು ಚೆಕ್ಕುಗಳ ಮೇಲೆ ಮಾತ್ರ ನನ್ನ ಸಹಿ ಇದೆ ಎನ್ನುತ್ತಾರೆ. ನಾನು ಹಾಕಿದ ಮೂರು ಸಹಿಗಳನ್ನು ನಾನು ನನಗೂ ಪೂರ್ವದಲ್ಲಿ ಸಂಬಂದಪಟ್ಟವರು ಸಹಿಗಳನ್ನು ಹಾಕಿದ್ದನ್ನು ನೋಡಿ ಪರಿಶೀಲಿಸಿಯೇ ಸಹಿ ಹಾಕಿದ್ದೇನೆ ಎಂದರೆ ನಿಜ. ಉಳಿದ ಎಂಟು ಚೆಕ್ಕುಗಳಿಗೆ ನನ್ನ ಪೂರ್ವಾಧಿಕಾರಿ ಸಹಿ ಮಾಡಿರುತ್ತಾರೆಯೇ ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣಕ್ಕೂ ಹಾಗೂ ಈ ಕೇಸಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 268 ತುಂಡು ಕಾಮಗಾರಿಗಳಿಗೆ ಸಂಬಂದಪಟ್ಟ ಕಡತದಲ್ಲಿರುವ ಯಾವ ದಾಖಲೆಯಲ್ಲಿಯೂ ಕೂಡಾ 3 ನೇ ಆರೋಪಿತನು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿ ಅಂತಹ ಯಾವುದೇ ದಾಖಲೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಆರ್.ಬಿ.ಹೆಚ್ ವಕೀಲರಿಂದಃ

ಮೇಲೆ ಹೇಳಿದ 268 ಕಾಮಗಾರಿಗಳು ಯಾವ ವಾರ್ಡಿಗೆ ಸಂಬಂದಪಟ್ಟದ್ದವು ಎಂದರೆ ಸಾಕ್ಷಿಯು ಅವುಗಳ ಡೀಟೆಲ್ಸ ಇಲ್ಲ ಎನ್ನುತ್ತಾರೆ. ಸದರಿ ಗುತ್ತಿಗೆಗಳು ಪಿಡಬ್ಲ್ಯೂಡಿ ವಿಭಾಗಕ್ಕೆ ಸಂಬಂದಪಟ್ಟ ಎಲ್ಲ ರೀತಿಯ ಹಾಗೂ 10 ಸಾವಿರ ಅಥವಾ ಅದಕ್ಕೂ ಕಡಿಮೆ ಮೊತ್ತದ ಕಾಮಗಾರಿಗಳು ಎನ್ನುತ್ತಾರೆ. ಪೊಲೀಸರ ಮುಂದೆ 268 ಕಾಮಗಾರಿಗಳ ವಿವರಣೆಗಳ ಬಗ್ಗೆ ಹೇಳಿಲ್ಲ.

ಸಾಮಾನ್ಯವಾಗಿ ಒಂದು ಅಥವಾ ಅದಕ್ಕೂ ಮೇಲ್ಪಟ್ಟು ವಾರ್ಡಗಳಿಗೆ ಪ್ರತ್ಯೇಕ ಪಿಡಬ್ಲ್ಯೂಡಿ ವಿಭಾಗದ ಇಂಜೀನಿಯರನ್ನು ನೇಮಕಾತಿ ಮಾಡುತ್ತೇವೆ ಎಂದರೆ ನಿಜ. ಆ ಸಂಬಂದಪಟ್ಟ ಇಂಜೀನಿಯರ ಇವರು ಆ ವಾರ್ಡಿನ ಯಾವ ಯಾವ ಕೆಲಸಗಳನ್ನು ಮಾಡಬೇಕು ಎಂಬ ಬಗ್ಗೆ ನಿರ್ಧೀಷ್ಟವಾಗಿ ನಮೂದಿಸಿರುತ್ತಾರೆ ಎಂದರೆ ಸಾಕ್ಷಿಯು ಪಿಡಬ್ಲ್ಯೂಡಿ ವಿಭಾಗದ ಎಲ್ಲ ಕೆಲಸಗಳನ್ನು ಮಾಡಬೇಕಾಗುತ್ತದೆ ಎನ್ನುತ್ತಾರೆ. 4 ನೇ ಆರೋಪಿಯನ್ನು ಅಮಾನತ್ತು ಮಾಡುವ ಪೂರ್ವದಲ್ಲಿ ಅವರು ಯಾವ ವಾರ್ಡಿನಲ್ಲಿ ಕೆಲಸ ಮಾಡುತ್ತಿದ್ದರು ಎಂಬುವುದನ್ನು ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿಯು ಸಂಬಂಧಪಟ್ಟ

ವಿಭಾಗದ ಮುಖ್ಯಸ್ಥರು ವರದಿಯನ್ನು ಸಲ್ಲಿಸಿದ್ದು ಅದರ ಆಧಾರದಲ್ಲಿ ನಾನು ಅಮಾನತ್ತು ಮಾಡಿದ್ದೇನೆ ಎನ್ನುತ್ತಾರೆ.

ಪಾಲಿಕೆಯವರು 4 ನೇ ಆರೋಪಿತನನ್ನು 6 ನೇ ವಾರ್ಡಿನ ಕಟ್ಟಡ ಕಾಮಗಾರಿಗಳು ಮತ್ತು ನೀರು ಸರಬರಾಜಿಗೆ ಸಂಬಂದಪಟ್ಟಂತೆ ಮಾತ್ರ ನೇಮಕ ಮಾಡಿದ್ದಾರೆ ಎಂದರೆ ಸಾಕ್ಷಿಯು ಅದು ಇಂಟರ್ನಲ್ ಮ್ಯಾಟರ್ ಆ ಬಗ್ಗೆ ನನಗೆ ನಿಖರವಾಗಿ ಗೊತ್ತಿಲ್ಲ ಎನ್ನುತ್ತಾರೆ. ಅದೇ ರೀತಿ ನಿಡಿ.1 ಆದೇಶದ ಮೇರೆಗೆ 4 ನೇ ಆರೋಪಿತನನ್ನು ವಾರ್ಡ ನಂ.11 ರಿಂದ 13 ಗಳಿಗೆ ಸಂಬಂದಪಟ್ಟಂತೆ ಕಟ್ಟಡ ಪರವಾನಿಗೆ ಮತ್ತು ನೀರು ಸರಬರಾಜಿಗೆ ಸಂಬಂದಪಟ್ಟಂತೆ ಮಾತ್ರ ನೇಮಕ ಮಾಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಆ ಬಗ್ಗೆ ನಿಖರವಾಗಿ ಗೊತ್ತಿಲ್ಲ ಹಾಗೂ ಆ ಸಿಬ್ಬಂದಿಯ ತಕ್ಷಣದ ಮೇಲಾಧಿಕಾರಿಯ ನಿರ್ಧಾರದಲ್ಲಿ ನಾನು ಹಸ್ತಕ್ಷೇಪ ಮಾಡಲು ಬರುವುದಿಲ್ಲ ಎನ್ನುತ್ತಾರೆ.

ಒಂದು ಸಿಬ್ಬಂದಿಗೆ ಒಂದು ಕೆಲಸವನ್ನು ವಹಿಸಿಕೊಟ್ಟರೆ ಆ ಕೆಲಸವನ್ನು ಮಾತ್ರ ಮಾಡಬೇಕು ಎಂದರೆ ಸಾಕ್ಷಿಯು ಮೌಖಿಕ ನಿರ್ದೇಶನದ ಮೇರೆಗೆ ಬೇರೆ ಕೆಲಸಗಳನ್ನು ಮಾಡಬೇಕು ಎನ್ನುತ್ತಾರೆ. ಮೌಖಿಕ ಆದೇಶದ ಮೇರೆಗೆ ಬೇರೆ ಕೆಲಸಗಳನ್ನು ಮಾಡಬೇಕಾಗುತ್ತದೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಮೇಲೆ 268 ತುಂಡು ಕಾಮಗಾರಿಗಳು 4 ನೇ ಆರೋಪಿತನಿಗೆ ಸಂಬಂದಪಡದೇ ಇರುವ ಕಾಮಗಾರಿಗಳು ಎಂದರೆ ಸರಿಯಲ್ಲ. ಒಂದು ಕಾಮಗಾರಿ ನಿಜವಾಗಿಯೂ ಪೂರ್ಣಗೊಂಡಿದೆಯಾ? ಅಥವಾ ಇಲ್ಲಾ? ಎಂಬ ಬಗ್ಗೆ ಪರಿಶೀಲನೆ ಮಾಡುವ ಕರ್ತವ್ಯ ನನಗೂ ಇರುತ್ತದೆ ಎಂದರೆ ಸಾಕ್ಷಿಯು ಆ ಬಗ್ಗೆ ಸುಪರ್ೀಮ್ ಅಧಿಕಾರ ಇರುತ್ತದೆ ಆದರೆ ಕೆಲಸದ ಒತ್ತಡಗಳು ಇರುತ್ತವೆ ಆದ್ದರಿಂದ ವಿಭಾಗದ ಮುಖ್ಯಸ್ಥರುಗಳ ಪರಿಶೀಲನೆ ಆಧಾರವನ್ನು ನಂಬಬೇಕಾಗುತ್ತದೆ ಎನ್ನುತ್ತಾರೆ. ಚೆಕ್ಕಿನೊಂದಿಗೆ ಸಂಬಂದಪಟ್ಟ ಪೂರ್ಣ ಕಡತ ಬರುತ್ತದೆ. ಆ ರೀತಿ ನನ್ನ ಬಳಿ ಕಡತ ಬಂದಾಗ ಆ ಕಡತದಲ್ಲಿ ಎಸ್ಟಿಮೇಟ್ ಮತ್ತು ಅಳತೆ ಪುಸ್ತಕ ಇದ್ದ ಬಗ್ಗೆ ಖಾತ್ರಿ ಮಾಡಿಕೊಂಡಿರುವಿರಾ? ಎಂದರೆ ಸಾಕ್ಷಿಯು ಸಂಬಂದಪಟ್ಟ ವಿಭಾಗದ ಮುಖ್ಯಸ್ಥರ ವರದಿಯನ್ನು ಆಧಾರಿಸಿರುತ್ತೇವೆ ಎನ್ನುತ್ತಾರೆ. ಆ ಕಡತದಲ್ಲಿ ಸಂಬದಂಪಟ್ಟ ಗುತ್ತಿಗೆದಾರ ನೊಂದಾಯಿತ ಗುತ್ತಿಗೆದಾರ ಹೌದಾ ಅಥವಾ

ಅಲ್ಲಾ ಹಾಗೂ ವರ್ಕ ಆರ್ಡರ ಪ್ರಕಾರ ಕೆಲಸ ಆಗಿದೇಯಾ? ಅಥವಾ ಇಲ್ಲಾ? ಎಂಬುವುದರ ಪರಿಶೀಲನೆ ಮಾಡಿದ್ದೀರಾ? ಎಂದರೆ ಸಾಕ್ಷಿಯು ಅದು ವಿಭಾಗದ ಮುಖ್ಯಸ್ಥರ ಕೆಲಸ ಎನ್ನುತ್ತಾರೆ. ನಾನು ನನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಬಂದಂತಹ ಕಡತಕ್ಕೆ ವಿಭಾಗದ ಮುಖ್ಯಸ್ಥರು ಜವಾಬ್ದಾರರು ಅಂತಾ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಆರೋಪಿತನಿಗೂ ಹಾಗೂ 268 ತುಂಡು ಕಾಮಗಾರಿಗಳು ಸಂಬಂಧ ಇಲ್ಲದೇ ಇದ್ದರೂ ಕುಡಾ ಹಾಗೂ ಯಾವುದೇ ದಾಖಾಲತಿಗಳನ್ನು ಪರಿಶೀಲನೆ ಮಾಡದೇ 4 ನೇ ಆರೋಪಿತನನ್ನು ಅಮಾನತ್ತು ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿನಲ್ಲಿ ಯಾವ ವಾರ್ಡಿನಲ್ಲಿ ಯಾವ ಯಾವ ಕಾಮಗಾರಿಗಳು ಅಕ್ರಮ ಕಾಮಗಾರಿಗಳು ಆಗಿವೆ ಎಂಬ ಬಗ್ಗೆ ಮಾಹಿತಿ ಇಲ್ಲದಿದ್ದರೂ ಕೂಡಾ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮ.1.25 ಕ್ಕೆ 5 ನೇ ಆರೋಪಿ ಪರ ವಕೀಲರು ಕಡತವನ್ನು ನೋಡಿಲ್ಲ ಆದ್ದರಿಂದ 3.00 ಗಂಟೆಗೆ ಪಾಟೀ ಸವಾಲನ್ನು ಮಾಡುತ್ತೇನೆ ಅಂತಾ ಹೇಳಿದ್ದು, ಸಾಕ್ಷಿಯು ಸಾ.6.00 ಗಂಟೆಗೆ ಹುಬ್ಬಳ್ಳಿ ಏರೋಪೋರ್ಟನಲ್ಲಿ ಪ್ಲೈಟ್ ಇದೇ ಅಂತಾ ಹೇಳಿದ್ದು ಅಕಸ್ಮಾತ 5 ನೇ ಆರೋಪಿ ಪರ ವಕೀಲರು ಪಾಟೀ ಸವಾಲನ್ನು 4.00 ಗಂಟೆಯ ಒಳಗಡೆ ಮುಗಿಸದೇ ಇದ್ದಲ್ಲಿ ಪಾಟೀ ಸವಾಲು ನಂತರವೂ ಕೂಡಾ ಮುಂದುವರೆದಲ್ಲಿ ಆ ಕಾರಣಕ್ಕಾಗಿ ಸಾಕ್ಷಿಯ ಪ್ಲೈಟ್ ಕ್ಯಾನ್ಸಲ್ ಆದಲ್ಲಿ ಸಾಕ್ಷಿಯ ಪ್ಲೈಟ್ ಚಾರ್ಜ್ ಆದ 6 ಸಾವಿರ ರೂಪಾಯಿಗಳನ್ನು ಕೊಡುವ ಷರತ್ತಿನೊಂದಿಗೆ ಪಾಟೀ ಸವಾಲನ್ನು ಮ.3.00 ಗಂಟೆ ಮುಂದೂಡಲಾಯಿತು.

ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಎಮ್ ವ್ಹಿ ಎಸ್ ವಕೀಲರಿಂದಃ

ನಮ್ಮ ಪಾಲಿಕೆಯಲ್ಲಿ ಮೇಲೆ ಹೇಳಿದ ವಿಭಾಗಗಳನ್ನು ಹೊರತುಪಡಿಸಿ ಬೇರೆ ವಿಭಾಗಗಳು ಇಲ್ಲ. ನಮ್ಮ ಪಾಲಿಕೆಯಲ್ಲಿ 5 ವಿಭಾಗಗಳು ಇವೆ ಅವುಗಳೆಂದರೆ ಪಿಡಬ್ಲೂಡಿ, ಕಂದಾಯ , ಆರೋಗ್ಯ , ಅಕೌಂಟ್ಸ ಹಾಗೂ ಆಡಳಿತ ವಿಭಾಗಗಳು. ಒಂದು ವಿಭಾಗ ಇನ್ನೊಂದು ವಿಭಾಗದ ಕೆಲಸದ ಬಗ್ಗೆ ಹಸ್ತಕ್ಷೇಪ ಮಾಡಲು ಬರುವುದಿಲ್ಲ ಎಂದರೆ ನಿಜ. ಒಂದು ಕಾಮಗಾರಿಯನ್ನು ತೆಗೆದುಕೊಳ್ಳುವ ಪೂರ್ವದಲ್ಲಿ ಅದರ ವೆಚ್ಚಿನ ಅಂದಾಜು ಪತ್ರಿಕೆಯನ್ನು ಜ್ಯೂನಿಯರ್ ಇಂಜೀನಿಯರ ಮಾಡಬೇಕಾಗುತ್ತದೆ ಎಂದರೆ ನಿಜ. ಅಂತಹ ಅಂದಾಜು ಪತ್ರಿಕೆಯನ್ನು

ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜೀನಿಯರ ಮತ್ತು ಎಕ್ಸಿಕ್ಯೂಟೀವ್ ಇಂಜೀನಿಯರ ಅನುಮೋಧಿಸಬೇಕು ಎಂದರೆ ನಿಜ. 10 ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಿಗೆ ಕಾಮಗಾರಿಗೆ ಟೆಂಡರ್ ಕರೆಯ ಅದಕ್ಕಿಂತ ಕಡಿಮೆ ಕಾಮಗಾರಿ ಇದ್ದರೆ ಟೆಂಡರ ಕರೆಯುವ ಅವಶ್ಯಕತೆ ಇಲ್ಲ ಎಂದರೆ ನನಗೆ ಈಗ ನೆನಪಿಲ್ಲ. ಸಾಕ್ಷಿ ಸ್ವತಹಃ ಹೇಳುತ್ತಾರೆ ಅವುಗಳನ್ನು ಸರಕಾರದವರು ಸ್ಥಯ ಅವಶ್ಯಕತೆಗೆ ಅನುಕೂಲಕರ ಆಗುವಂತೆ ಮಾರ್ಪಾಡು ಮಾಡುತ್ತಾರೆ. ಟೆಂಡರ್ ಕರೆಯಬೇಕಾದ ಕಾಮಗಾರಿ ಆಗಲೀ ಅಥವಾ ಟೆಂಡರ ಕರೆಯಲಾಗದ ಕಾಮಗಾರಿ ಆಗಲೀ ಅವುಗಳನ್ನೆಲ್ಲಾ ನೊಂದಾಯಿತ ಗುತ್ತಿಗೆದಾರರಿಗೆ ಕೊಡಬೇಕು ಎಂದರೆ ನಿಜ. ಎಲ್ಲ ಇಂಜಿನೀಯರಗಳ ಕಛೇರಿಯಲ್ಲಿ ನೊಂದಾಯಿತ ಗುತ್ತಿಗೆದಾರರ ಲಿಸ್ಟ ಇರುತ್ತದೆ. ಅಂದಾಜು ಖರ್ಚು ಪತ್ರಿಕೆ ಅನುಮೋಧನೆ ಆದ ನಂತರ ವರ್ಕ ಆರ್ಡರ ಅನುಮೋಧನೆ ಆಗುತ್ತದೆ ಎಂದರೆ ನಿಜ. ಅಂದಾಜು ಖರ್ಚು ಪತ್ರಿಕೆ ಅನುಮೋದನೆ ಆದ ನಂತರ ವರ್ಕ ಆರ್ಡರನ್ನು ಎಕ್ಸಿಕ್ಯೂಟೀವ್ ಇಂಜೀನಿಯರ, ಸೂಪರಿಟೆಂಡೆಂಟ್ ಇಂಜೀನಿಯರ ಅಥವಾ ಆಯುಕ್ತರು ತೆಗೆಯುತ್ತಾರೆ ಎಂದರೆ ಸಾಕ್ಷಿಯು ಕಾಮಗಾರಿಯ ಖರ್ಚಿನ ಮಿತಿಯ ಪ್ರಕಾರ ಸಂಬಂದಪಟ್ಟ ಇಂಜಿನೀಯರ ಅಥವಾ ಆಯುಕ್ತರು ತೆಗೆಯುತ್ತಾರೆ ಎನ್ನುತ್ತಾರೆ. ವರ್ಕ ಆರ್ಡರನಲ್ಲಿ ಏನೆಲ್ಲಾ ಕೆಲಸಗಳನ್ನು ಮಾಡಬೇಕು ಎಂಬ ಬಗ್ಗೆ ವಿವರವಾಗಿ ನಮೂಧಿಸಲಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿಯೊಂದು ಅಂದಾಜು ಖರ್ಚು ಪತ್ರಿಕೆ ಆಧಾರದ ಮೇಲೆ ಪ್ರತ್ಯೇಕ ಕಡತ ತಯಾರು ಆಗುತ್ತದೆ ಎಂದರೆ ನಿಜ. ಕಾಮಗಾರಿ ಖರ್ಚಿನ ಸೀಮೆಯ ಆಧಾರದಲ್ಲಿ ಸಂಬಂದಪಟ್ಟ ಇಂಜಿನೀಯರ ಇವರು ವರ್ಕ ಆರ್ಡರನ್ನು ಎನಪೋರ್ಸ ಮಾಡಬೇಕು ಎಂದರೆ ನಿಜ. ಸಂಬಂದಪಟ್ಟ ಕಡತದಲ್ಲಿ ದಿನನಿತ್ಯದ ಅಳತೆಗಳನ್ನು ಬರೆಯುತ್ತಾರೆ ಎಂದರೆ ಸಾಕ್ಷಿಯು ಕಾಮಗಾರಿ ಪೂರ್ಣಗೊಂಡ ನಂತರ ಬರೆಯುತ್ತಾರೆ ಎನ್ನುತ್ತಾರೆ. ಸಾಕ್ಷಿ ಸ್ವತಹಃ ಹೇಳುತ್ತಾರೆ ಜ್ಯೂನಿಯರ್ ಇಂಜೀನಿಯರ ಪ್ರತಿನಿತ್ಯದ ಕಾಮಗಾರಿಯ ಬೆಳವಣಿಗೆಯ ಬಗ್ಗೆ ನಿಗಾ ಇಡುತ್ತಾರೆ. ಅದೇ ರೀತಿ ಪ್ರತಿನಿತ್ಯದ ಬೆಳವಣಿಗೆಯೂ ಕೂಡಾ ಕಡತದಲ್ಲಿ ನಮೂದು ಆಗುವುದಿಲ್ಲ. ಪ್ರತಿಯೊಂದು ಕಾಮಗಾರಿಯಾದ ನಂತರ ಕೊನೆಯ ಬಿಲ್ಲು ತಯಾರು ಆಗುತ್ತದೆ. ಕಾಮಗಾರಿಯ ಮೊತ್ತ ಹೆಚ್ಚಾಗಿದ್ದಲ್ಲಿ ಮಧ್ಯಂತರ ಬಿಲ್ಲುಗಳು ಆಗಬಹುದು ಎನ್ನುತ್ತಾರೆ. 268 ಕಾಮಗಾರಿಗಳಲ್ಲಿ ಮಧ್ಯಂತರ ಬಿಲ್ಲುಗಳು ಆಗಿವೇ ಅಥವಾ ಇಲ್ಲಾ ಎಂಬುವುದು ನನಗೆ ಗೊತ್ತಿಲ್ಲ. ಪ್ರತಿಯೊಂದು ಕಾಮಗಾರಿಯ ಕಡತ ಮೊದಲು ಎಕ್ಸಿಕ್ಯೂಟೀವ್ ಇಂಜೀನಿಯರ, ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಜ್ಯೂನಿಯರ್ ಇಂಜೀನಿಯರ, ನಂತರ ಸೂಪರಿಟೆಂಡೆಂಟ್ ಇಂಜಿನೀಯರಗಳ ಮೂಲಕ ಹೋಗಿ ಕೊನೆಗೆ ಅಕೌಂಟ್ಸ ವಿಭಾಗಕ್ಕೆ ಹೋಗುತ್ತದೆ ಎಂದರೆ ನಿಜ. ಆ ಕಡತದೊಂದಿಗೆ

ಮೇಸರಮೆಂಟ್ ಪುಸ್ತಕವು ಹೋಗುತ್ತದೆ ಎಂದರೆ ನಿಜ. ನಿಜವಾಗಿಯೂ ಕಾಮಗಾರಿ ಆಗಿದೇಯಾ? ಅಥವಾ ಇಲ್ಲಾ? ಎಂಬುವುದನ್ನು ಪರಿಶೀಲಿಸುವ ಕೆಲಸ ಅಕೌಂಟ್ಸ ವಿಭಾಗದ ಕೆಲಸ ಅಲ್ಲ ಎಂದರೆ ನಿಜ. ಪ್ರತಿಯೊಂದು ಬಿಲ್ಲನ್ನು ಸರಿಯಾಗಿ ಪ್ರೋಸ್ಸೆಸ್ ಮಾಡಿದ್ದಾರೆ ಅಥವಾ ಇಲ್ಲಾ ಎಂಬುವುದನ್ನು ಅಕೌಂಟ್ಸ ವಿಭಾಗದವರು ಪರಿಶೀಲಿಸಬೇಕು ಎಂದರೆ ನಿಜ. ಪ್ರತಿಯೊಂದು ಬಿಲ್ಲುಗಳನ್ನು ತ್ರಿಪ್ರತಿಗಳಲ್ಲಿ ಕಳುಹಿಸಬೇಕು ಎಂದರೆ ನನಗೆ ಗೊತ್ತಿಲ್ಲ. ಸೂಪರಿಟೆಂಡೆಂಟ್ ಅಕೌಟೆಂಟ್ ಪಾಸು ಮಾಡಿದ ನಂತರ ಚೀಫ್ ಅಕೌಂಟ್ಸ ಆಫೀಸರ್ ರವರಿಗೆ ಕಡತವು ಹೋಗುತ್ತದೆ ಎಂದರೆ ನಿಜ. ಚೀಫ್ ಅಕೌಂಟ್ಸ ಆಫೀಸರ್ ರವರಿಗೆ ತಮಗೆ ಕಳುಹಿಸಿದ ಕಡತದಲ್ಲಿಯ ಪ್ರತಿಯೊಂದು ದಾಖಲೆಯನ್ನು ಪರಿಶೀಲಿಸಿ ನೋಡಿ ನಂತರ ಸಹಿ ಮಾಡುವ ಹಕ್ಕು ಇದೆ ಎಂದರೆ ನಿಜ. ತದನಂತರ ಚೀಪ ಅಕೌಂಟ್ಸ ಆಫೀಸರ್ ಅನುಮೋಧನೆ ಮಾಡಿದ ನಂತರ ಸದರಿ ಕಡತವು ಇಂಟರ್ನಲ್ ಟ್ರೇಸರಿ ಕಛೇರಿಗೆ ಹೋಗುತ್ತದೆ ಎಂದರೆ ನಿಜ. ಟ್ರೇಸರಿ ಸೆಕ್ಷನ್ನಿನವರ ನಂತರ ಚೆಕ್ಕನ್ನು ಬರೆಯುತ್ತಾರೆ ಎಂದರೆ ನಿಜ. ಚೆಕ್ಕನ್ನು ಬರೆದ ನಂತರ ಚೀಪ್ ಅಕೌಂಟ್ಸ ಆಫೀಸರ ಅನುಮೋಧಿಸಿದ ಕಡತದೊಂದಿಗೆ ಚೆಕ್ಕನ್ನು ಸಹಿಗೋಸ್ಕರ ಚೀಪ್ ಅಕೌಂಟ್ಸ ಆಫೀಸರಗೆ ಕಳುಹಿಸುತ್ತಾರೆಎಂದರೆ ನಿಜ. ಚೀಫ್ ಅಕೌಂಟ್ಸ ಆಫೀಸರ ಚೆಕ್ಕನ್ನು ಸಹಿ ಮಾಡಿದ ನಂತರ ಆ ಚೆಕ್ಕು ಆಯುಕ್ತರಿಗೆ ಅವರ ಸಹಿಗೋಸ್ಕರ ಅಲ್ಲಿ ಹೋಗುತ್ತದೆ ಎಂದರೆ ನಿಜ. ಚೀಪ್ ಅಕೌಂಟ್ಸ ಆಫೀಸರ್ ಮತ್ತು ಆಯುಕ್ತರು ಸಹಿ ಮಾಡಿದ ಚೆಕ್ಕು ಸಂಬಂದಪಟ್ಟವರಿಗೆ ಇಂಜೀನಿಯರಗಳ ಮೂಲಕ ಹೋಗುತ್ತದೆ. ಬಿಲ್ಲಿನ ಒಂದು ಪ್ರತಿಯನ್ನು ಟ್ರೇಸರಿಯಲ್ಲಿ ಉಳಿಯುತ್ತದೆ ಬಾಕಿ ಪ್ರತಿಗಳು ಎಕ್ಸಿಕ್ಯೂಟೀವ್ ಇಂಜೀನಿಯರ ಕಛೇರಿಗೆ ಹೋಗುತ್ತದೆ ಎಂದರೆ ನನಗೆ ನೆನಪಿಲ್ಲ.

ತನಿಖೆಯ ದಾಖಲೆಗಳಲ್ಲಿ 1292 ನಂಬರಿನ ಅಳತೆ ಪುಸ್ತಕ ಇಟಗಟ್ಟಿಯವರ ಬಳಿ ಹೋಗಿದೆ ಅಂತಾ ಕಾಣೆಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ 1454 ನಂಬರಿನ ಅಳತೆ ಪುಸ್ತಕ ಮುತಗಣ್ಣವರ ಬಳಿ ಹೋಗಿದೆ ಅಂತಾ ಕಾಣೆಸಲಾಗಿದೆ ಎಂದರೆ ಸಾಕ್ಷಿಯು ಆ ಸಮಯದಲ್ಲಿ ನಾನು ವರ್ಗಾವಣೆಯಾಗಿದ್ದೇನು ಎನ್ನುತ್ತಾರೆ. ಪ್ರತಿಯೊಂದು ಚೆಕ್ಕನ್ನು ಸಹಿ ಮಾಡುವ ಪೂರ್ವದಲ್ಲಿ ಅದಕ್ಕೆ ಸಂಬಂದಪಟ್ಟ ಕಡತವನ್ನು ಪರಿಶೀಲಿಸುವ ಜವಾಬ್ದಾರಿ ನನಗೆ ಇರುತ್ತದೆ ಎಂದರೆ ನಿಜ. ಅಕೌಂಟ್ಸ ವಿಭಾಗ ನನ್ನ ಮೇಲ್ವಿಚಾರಣೆಯಲ್ಲಿಯೇ ಕೆಲಸ ಮಾಡುತ್ತದೆ ಎಂದರೆ ನಿಜ. ಉಳಿದ ಅಧಿಕಾರಿಗಳು ಸಹಿ ಮಾಡಿದ ಆಧಾರದಲ್ಲಿಯೂ ಕೂಡಾ ನಾನು ಮೂರು ಚೆಕ್ಕುಗಳನ್ನು ಸಹಿ ಮಾಡಿದ್ದೇನೆ. ಅಳತೆ ಪುಸ್ತಕ , ಅಂದಾಜು ಖರ್ಚು ಪತ್ರಿಕ, ವರದಿ , ಚೆಕ್ಕುಗಳು,

ಹಾಗೂ ಇನ್ನಿತರೇ ದಾಖಲಾತಿಗಳನ್ನು ತನಿಖಾಧಿಕಾರಿಗೆ ಅಥವಾ ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಆಗ ನನ್ನ ವರ್ಗಾವಣೆ ಆಗಿತ್ತು ಎನ್ನುತ್ತಾರೆ. ಘಟನೆ ಆಗಿದೇ ಅಂತಾ ಹೇಳಲಾದ ದಿನಾಂಕದ ಎರಡು ವರ್ಷಗಳ ನಂತರ ನಿಪಿ.1 ನ್ನು ಕೊಡಲಾಗಿದೆ ಎಂದರೆ ಆಗ ನಾನು ಇರಲಿಲ್ಲ. ಈ ಕೇಸಿಗೂ ಮತ್ತು 5 ನೇ ಆರೋಪಿತನಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಹುಬ್ಬಳ್ಳಿಯಲ್ಲಿ ರಸ್ತೆಗಳನ್ನು ಹೊಸದಾಗಿ ಮಾಡಿದ ಮೂರು ತಿಂಗಳ ನಂತರ ಅವುಗಳನ್ನು ಮಾಡಿದ್ದಾರೋ ಅಥವಾ ಇಲ್ಲ ಎಂಬ ಚಿತ್ರಣ ಕಾಣುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಪಾಟೀ ಸವಾಲುಃ 7 ನೇ ಆರೋಪಿ ಪರ ಶ್ರೀ ಆರ್ ಪಿ ಸಿ ವಕೀಲರಿಂದಃ

ಮೇಲಿನ ಪಾಟೀ ಸವಾಲನ್ನು ಆರೋಪಿ ನಂ.7 ಕ್ಕೆ ಅಳವಡಿಸಿಕೊಂಡು ಪಾಟೀ ಸವಾಲನ್ನು ಮುಂದುವರೆಯಿಸಿರುತ್ತಾರೆ.

7 ನೇ ಆರೋಪಿಯ ಎರವಲು ಸೇವೆಯನ್ನು ಪಡೆದುಕೊಂಡಿದೆ ಎಂದರೆ ನಿಜ. 7 ನೇ ಆರೋಪಿಯು ಒಬ್ಬ ಗೆಜೆಟೆಡ್ ಅಧಿಕಾರಿ ಎಂದರೆ ನಿಜ. ಈ ಕೇಸಿನಲ್ಲಿಯ ಅಳತೆ ಪುಸ್ತಕ ನಮ್ಮ ಕಛೇರಿಗೆ ಬಂದು ಅದರ ಸಂಬಂದಪಟ್ಟ ಕಡತ ನಮ್ಮ ಅಂದರೆ ಆಯುಕ್ತರ ಕಛೇರಿಯಿಂದ ಅನುಮೋಧನೆ ಆಗುವವರೆಗೂ ಅಕೌಂಟ್ಸ ವಿಭಾಗಕ್ಕೆ ಹೋಗುವುದಿಲ್ಲ ಎಂದರೆ ಸಾಕ್ಷಿಯು ಅಳತೆ ಪುಸ್ತಕ ನೇರವಾಗಿ ಇಂಜಿನೀಯರ ಮುಖಾತಂರ ಅಕೌಂಟ್ಸ ವಿಭಾಗಕ್ಕೆ ಹೋಗುತ್ತದೆ ಹಾಗೂ ಕೊನೆಯದಾಗಿ ಆಯುಕ್ತರ ಕಛೇರಿಗೆ ಬರುತ್ತದೆ ಎನ್ನುತ್ತಾರೆ. ಎಲ್ಲ ಅಕೌಂಟ್ಸಗೆ ಸಂಬಂದಪಟ್ಟ ಕೆಲಸಗಳು ಪಿಡಬ್ಲೂಡಿ ಕೋಡ ನ ಪ್ರಕಾರ ನಡೆಯಬೇಕು ಎಂದರೆ ನನಗೆ ಗೊತ್ತಿಲ್ಲ. ಒಂದು ಬಿಲ್ಲು ಕಾಮಗಾರಿಯ ಅಂಕಿಸಂಖ್ಯೆಗಳಲ್ಲಿ ಏನಾದರೂ ವ್ಯತ್ಯಾಸ ಇದೇಯಾ? ಎಂಬುವುದನ್ನು ಪರಿಶೀಲಿಸುವುದು ಅಕೌಂಟ್ಸ ವಿಭಾಗದ ಜವಾಬ್ದಾರಿ ಎಂದರೆ ನಿಜ. ಟೆಂಡರ ಪ್ರಕಾರವೇ ಬಿಲ್ಲು ಇದ್ದಲ್ಲಿ ಹಾಗೂ ಅದರಲ್ಲಿ ಯಾವುದೇ ಅರ್ಥಮ್ಯಾಟಿಕ್ ತಪ್ಪುಗಳು ಇಲ್ಲದಿದ್ದಲ್ಲಿ ಮಾತ್ರ ಕಡತವು ಆಯುಕ್ತರ ಕಛೇರಿಗೆ ಬರುತ್ತದೆ ಎಂದರೆ ಸಾಕ್ಷಿಯು ಕಡತ ಮತ್ತು ಚೆಕ್ಕು ಬರುತ್ತದೆ ಎನ್ನುತ್ತಾರೆ. ಆಯುಕ್ತರ ಕಛೇರಿ ಚೆಕ್ಕನ್ನು ಸಹಿ ಮಾಡುವ ಪೂರ್ವದಲ್ಲಿ ಟೆಂಡರ ಇದೇಯಾ? ಅಥವಾ ಇಲ್ಲಾ? , ಅಳತೆ ಪುಸ್ತಕದ ಪ್ರಕಾರ ಟೆಂಡರ್ ಇದೇಯಾ? ಅಥವಾ ಇಲ್ಲಾ? , ಬಿಲ್ಲುಗಳು ಇದೇಯಾ? ಅಥವಾ ಇಲ್ಲಾ? ಹಾಗೂ ಅಕೌಂಟ್ಸ ಸೆಕ್ಷನ್ ಲೆಕ್ಕ ಸರಿಯಾಗಿದೆ ಎಂಬ ಹಿಂಬರಹವನ್ನು ಪರಿಶೀಲಿಸುವ ಕರ್ತವ್ಯ ಆಯುಕ್ತರ ಮೇಲೆ ಇದೆ ಎಂದರೆ ನಿಜ. ನಾನು ಸಹಿ ಮಾಡುವಾಗ ಆ ಕಡತದ ಲೆಕ್ಕದ ಬಗ್ಗೆ ನನಗೆ ಯಾವುದೇ ಸಂಶಯ ಬರದೇ ಇರುವುದರಿಂದ ಚೆಕ್ಕನ್ನು ಸಹಿ

ಮಾಡಿದ್ದೇನೆ ಎಂದರೆ ನಿಜ.

ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಎಸ್ ಆರ್ ಎ ವಕೀಲರ ಪರವಾಗಿ ಶ್ರೀ ವ್ಹಿ ಎಮ್ ಎನ್ ವಕೀಲರಿಂದಃ

ಈ ಹಂತದಲ್ಲಿ 2 ನೇ ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೇಳಿದ್ದರಿಂದ ಯಾವುದೇ ಸಕಾರಣಗಳು ಇಲ್ಲದೇ ಇರುವುದರಿಂದ ಪ್ರಾರ್ಥನೆಯನ್ನು ತಳ್ಳಿ ಹಾಕಿ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ 8 ನೇ ಆರೋಪಿ ಪರ ವಕೀಲರಿದಃ

8 ನೇ ಆರೋಪಿ ಹಾಜರಿದ್ದು, 8 ನೇ ಆರೋಪಿ ಪರ ವಕೀಲರು ಗೈರು ಹಾಜರಾಗಿದ್ದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ : ಇಲ್ಲ

(ನನ್ನ ಹೇಳಿಕೆ ಪ್ರಕಾರ ಬೆರಳಚ್ಚುಗಾರರಿಂದ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರದಲ್ಲಿ ಮುದ್ರಿಸಲಾಯಿತು)

ಓ ಹೇ ಕೆ ಸರಿ ಇದೆ,

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಮ್ ಎಫ್ , ಹುಬ್ಬಳ್ಳಿ.